ದಿನಾಂಕ 17-11-2022 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಅರ್ಜಿಗಳ ಮೇಲಿನ ಆದೇಶದಂತೆ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ. ಐ ಕೆ ಹೆಚ್ ವಕೀಲರಿಂದ :

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಬರೆಯಲು ನಾನೇ ಮಾಹಿತಿ ಕೊಟ್ಟಿದ್ದೇನೆ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನಾನು ಮತ್ತು ನನ್ನ ಸಹೋದರಿಯರು ಸೇರಿ ಮಾಹಿತಿ ಕೊಟ್ಟಿದ್ದೇವೆ. ದಾವಾ ಆಸ್ತಿಗಳ ಸರ್ವೆ ನಂಬರ್ ಹೇಳಲಾಗುತ್ತದೆ. ದಾವಾ ಆಸ್ತಿಗಳ ಸರ್ವೆ ನಂಬರ್ 16 ರಲ್ಲಿ 3 ಎಕರೆ 20 ಗುಂಟೆ, ರಿ.ಸ.ನಂ.199/3 ರಲ್ಲಿ 14 ಗುಂಟೆ, ರಿ.ಸ.ನಂ. 275/1 ರಲ್ಲಿ 3 ಎಕರೆ, ರಿ.ಸ.ನಂ. 275/4 ರಲ್ಲಿ 02 ಎಕರೆ 25 ಗುಂಟೆ ಇದೆ. ದಾವಾ ಆಸ್ತಿಗಳ ಚಕಬಂದಿಯನ್ನು ಬರೆಯಿಸಿಲ್ಲ. ದಾವಾ ಆಸ್ತಿಗಳು ನನ್ನ ಅಜ್ಜನಿಂದ ನನ್ನ ತಂದೆಗೆ ಬಂತು. 1 ನೇ ವಾದಿಯ ಮದುವೆ ನನ್ನ ತಂದೆ

ತೀರಿಕೊಂಡ ನಂತರ ಆಗಿದೆ. ನನ್ನ ತಂದೆ ತೀರಿಕೊಂಡ ಎಷ್ಟು ದಿವಸಕ್ಕೆ 1 ನೇ ವಾದಿಯ ಮದುವೆಯಾಗಿದೆ ಎಂದು ಹೇಳಲಾಗುವುದಿಲ್ಲ. 1 ನೇ ವಾದಿಯ ಮದುವೆ 1988 ರಲ್ಲಿ ಆಗಿದೆ ಎಂದರೆ ಸರಿಯಲ್ಲ. 2 ನೇ ವಾದಿಯ ಮದುವೆ 28 ವರ್ಷಗಳ ಹಿಂದೆ ಆಗಿದೆ ಎಂದರೆ ಗೊತ್ತಿಲ್ಲ. ನನ್ನ ಮದುವೆ 2002 ರಲ್ಲಿ ಆಗಿದೆ ಎಂದರೆ ಸರಿ. 4 ನೇ ವಾದಿಯ ಮದುವೆ 2004 ರಲ್ಲಿ ಮತ್ತು 5 ನೇ ವಾದಿಯ ಮದುವೆ 2009 ರಲ್ಲಿ ಆಗಿದೆ ಎಂದರೆ ಸರಿ. ನನ್ನ ಮತ್ತು ನನ್ನ ಸಹೋದರಿಯರ ಮದುವೆಯನ್ನು ಪ್ರತಿವಾದಿಯರೇ ನಿಂತು ಮಾಡಿಸಿದ್ದಾರೆ ಎಂದರೆ ಸರಿ. ಮದುವೆಯ ಖರ್ಚು ವೆಚ್ಚಗಳನ್ನು ಪ್ರತಿವಾದಿಯರೇ ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿ ತೀರಿಕೊಂಡು 6 ವರ್ಷಗಳಾಗಿವೆ. 2014 ರಲ್ಲಿ ನನ್ನ ತಾಯಿ ತೀರಿಕೊಂಡಿದ್ದಾರೆ ಎಂದರೆ ಸರಿ. ನನ್ನ ತಾಯಿ ಮೃತಪಟ್ಟ ನಂತರ ಅವರಿಗೆ ಸೇರಿದ 4 ತೊಲೆ ಬಂಗಾರ, ಕಾಲಿನ ಒಡವೆಗಳು, ಬಟ್ಟೆಗಳು ಮತ್ತು ಬಾಂಡೆ ಸಾಮಾನುಗಳನ್ನು ನಾವು ಸಹೋದರಿಯರು ಹಂಚಿಕೊಂಡಿದ್ದೇವೆ ಎಂದರೆ ಸರಿಯಲ್ಲ.

2. ದಾವಾ ಆಸ್ತಿಗಳು ನನ್ನ ತಂದೆಗೆ ಯಾವ ನಾತೆಯಿಂದ ಬಂತು ಎಂದು ಹೇಳಲಾಗುವುದಿಲ್ಲ. ನನ್ನ ತಂದೆಯ ಮರಣಾನಂತರ ದಿನಾಂಕ 25-02-1989 ರಲ್ಲಿ ನನ್ನ ತಾಯಿ ನಮ್ಮೆಲ್ಲರ ಕಬೂಲಿ ನಾತೆಯಿಂದ ಪ್ರತಿವಾದಿಯರ ಹೆಸರುಗಳನ್ನು ರಿ.ಸ.ನಂ. 16, 199/3 ಮತ್ತು 275/1 ರ ಆಸ್ತಿಗಳಲ್ಲಿ ಸೇರಿಸಿದರು ಎಂದರೆ ಸರಿ, ಸಾಕ್ಷಿ ಮುಂದುವರೆದು ಇಲ್ಲ ಎಂದು ನುಡಿಯುತ್ತಾರೆ. ಆ ಬಗ್ಗೆ ಡ ಶೇಜ ನಂ. 3113 ಮಂಜೂರಾಯಿತು ಎಂದರೆ ಸರಿಯಲ್ಲ. ಈ ವಿಷಯ ನನಗೆ ವಯಕ್ತಿಕವಾಗಿ ಗೊತ್ತಿದೆ ಎಂದರೆ ಸರಿಯಲ್ಲ. ಡ ಶೇಜ ನಂ. 3113 ಮಂಜೂರಾದ ನಂತರ 2 ರಿಂದ 5 ನೇ ವಾದಿಯರ ಮದುವೆಯಾಗಿದೆ ಎಂದರೆ ಸರಿಯಲ್ಲ. ಈ ವಿಷಯ ನಮಗೆ ವಯಕ್ತಿಕವಾಗಿ ಗೊತ್ತಿದೆ ಎಂದರೆ ಸರಿಯಲ್ಲ.

(ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್